# ನೇತಾಜಿ ಸಾವು: ಸತ್ಯದ ಹುಡುಕಾಟ

ಭಾರತದ ಹಲವು ಬಗೆಹರಿಯದ ಪ್ರಕರಣಗಳ ಪೈಕಿ ಸ್ವಾತಂತ್ರ್ಯ ಸೇನಾನಿ ನೇತಾಜಿ ಸುಭಾಷ್‌ಚಂದ್ರ ಬೋಸ್ ಅವರ ನಾಪತ್ತೆ ಪ್ರಕರಣವೂ ಒಂದು. ನೇತಾಜಿ ತೈವಾನ್‌ನ ತೈಹೋಕುವಿನಲ್ಲಿ ಆದ ವಿಮಾನ ಅಪಘಾತದಲ್ಲಿ ಮೃತಪಟ್ಟರು ಎಂಬುದು ಎಲ್ಲರ ತಿಳಿವಳಿಕೆಯಾಗಿದೆ. ಆದರೆ, ಅವರ ಸಾವಿನ ಕುರಿತ ವಿವಾದ ಆರಂಭವಾಗಿದ್ದು ಜಪಾನ್ ಟೋಕಿಯೊದಲ್ಲಿ 1945 ಆಗಸ್ಟ್, 23ರಂದು ಅವರ ಸಾವಿನ ಕುರಿತ ಪ್ರಕಟಣೆಯಿಂದ. ಇದಕ್ಕೂ ಅವರ ಸಾವಿನ ಕುರಿತಾದ ಪತ್ರಿಕಾ ಪ್ರಕಟಣೆಗಳಿಗೂ ವ್ಯತಿರಿಕ್ತ ಅಂಶಗಳು ಇದ್ದುದು ಅನುಮಾನದ ಹೊಗೆ ಏಳಲು ಕಾರಣವಾಯಿತು.

ಇವೂ ಸೇರಿದಂತೆ ಆನಂತರದ ಬೆಳವಣಿಗೆಯನ್ನೂ ಒಳಗೊಂಡ ಸಮಗ್ರ ಚಿತ್ರಣವನ್ನು ಪತ್ರಕರ್ತೆ ಚೂಡಿ ಶಿವರಾಂ ತಮ್ಮ ಈ ಪುಸ್ತಕ 'ನಿಗೂಢ ನೇತಾಜಿ'ಯಲ್ಲಿ ಕೊಟ್ಟಿದ್ದಾರೆ. 'ಪ್ರಜಾವಾಣಿ' ದಿನಪತ್ರಿಕೆಯಲ್ಲಿ ಮಾಲಿಕೆಯಾಗಿ ಪ್ರಕಟಗೊಂಡ ಬರಹಗಳನ್ನು 'ಪ್ರಜಾವಾಣಿ ಪ್ರಕಾಶನ' ಪುಸ್ತಕ ರೂಪದಲ್ಲಿ ಪ್ರಕಟಿಸಿದೆ.

ಪತ್ರಕರ್ತೆ ಚೂಡಿ ಶಿವರಾಂ ಅವರು ಈ ಪುಸ್ತಕದಲ್ಲಿ ಹೇಳಿರುವಂತೆ ನೇತಾಜಿ ನಾಪತ್ತೆಯ ಬಗ್ಗೆ ಮೂರು ಕತೆಗಳಿವೆ: ಒಂದು – ತೈವಾನ್‌ನ ತೈಹೋಕುವಿನಲ್ಲಿ ಆದ ವಿಮಾನ ಅಪಘಾತದಲ್ಲಿ ಮೃತಪಟ್ಟಿದ್ದು. ಇನ್ನೊಂದು ಗುಮ್ನಾಮಿ ಬಾಬ ಎಂಬ ಸನ್ಯಾಸಿಯಾಗಿ ಬದುಕಿದ್ದು. ಕೊನೆಯದು – ಸೈಬೀರಿಯಾ ಹಾಗೂ ರಷ್ಯಾದಲ್ಲಿ ಅವರಿಗೆ ಚಿತ್ರಹಿಂಸೆ ನೀಡಲಾಯಿತು ಎಂಬುದು.

ನೇತಾಜಿ ಅವರ ಅಪಾರ ಜನಪ್ರಿಯತೆಯೇ ಅವರ ಸಾವಿನ ಕುರಿತಾಗಿ ಹತ್ತಾರು ಊಹೆಗಳನ್ನು, ಕಲ್ಪನೆಗಳನ್ನು ಮಾಡುವಂತೆ ಮಾಡಿದೆ. ಅವರ ಸಾವಿನ ನಿಗೂಢತೆಯನ್ನು ಭೇದಿಸುವ ನಿಟ್ಟಿನಲ್ಲಿ ಆಯೋಗಗಳು ರಚನೆಯಾದವು. ಅನುಜ್ ಧರ್ ತರಹದ ಪತ್ರಕರ್ತರು ಅದರ ಹಿಂದೆ ಬಿದ್ದರು. ಈ ಪುಸ್ತಕದಲ್ಲಿನ ನೇತಾಜಿ ಅವರ ಸಾವಿನ ತನಿಖೆ ಹಲವಾರು ರೋಚಕ, ಮಹತ್ವದ, ಮನಕಲಕುವ ಅಂಶಗಳಿಂದ ಕೂಡಿದೆ. ಇದೆಲ್ಲದರ ಜೊತೆಗೆ ಪುಸ್ತಕದ ಲೇಖಕಿ, ನೇತಾಜಿ ಅವರ ಹೋರಾಟದಿಂದ ಕೂಡಿದ ಸಾರ್ವಜನಿಕ ಮತ್ತು ವೈಯಕ್ತಿಕ ಬದುಕನ್ನು, ಭಾರತದ ಸ್ವಾತಂತ್ರ್ಯ ಸಂಗ್ರಾಮದ ಹಿನ್ನೆಲೆಯಲ್ಲಿ ತಮಗೆ ಸಿಕ್ಕ ಅಪರೂಪದ ವಿವರಗಳೊಂದಿಗೆ ಚಿತ್ರಿಸಿದ್ದಾರೆ. ಇಲ್ಲೇ ನೇತಾಜಿ ಅವರ, ಆಸ್ಟ್ರಿಯಾ ಮೂಲದ ಪತ್ನಿ ಎಮಿಲಿ ಶ್ರೆಂಕ್ಲ್, ಅವರ ಮಗಳು ಅನಿತಾರ ತ್ಯಾಗದಿಂದ ಕೂಡಿದ ಬದುಕಿನ ವಿವರಗಳೂ ಇಲ್ಲಿವೆ. ನೇತಾಜಿ ಅವರ ಅಸಾಮಾನ್ಯ ಕ್ರಿಯಾಶೀಲ ವ್ಯಕ್ತಿತ್ವ ಮುಕ್ಕಾಗದಂತೆ ಬಂದಿದೆ.




**ನಿಗೂಢ ನೇತಾಜಿ**

(ಸುಭಾಷ್‌ಚಂದ್ರ ಬೋಸ್ ಕಣ್ಮರೆ–ಸಾವು: ಶೋಧಪ್ರಬಂಧಗಳು)
ಲೇ: ಚೂಡಿ ಶಿವರಾಂ,
ಪು: 145 ಬೆ: ₹ 150,
ಪ್ರ: ಪ್ರಜಾವಾಣಿ ಪ್ರಕಾಶನ,
ನಂ. 75, ಮಹಾತ್ಮ ಗಾಂಧಿ ರಸ್ತೆ,
ಬೆಂಗಳೂರು – 560 001

**ಆನ್‌ಲೈನ್ ಖರೀದಿಗೆ:**
bit.ly/2XoO65c